ಶ್ರೀ ಎ.ಆರ್. ಕೃಷ್ಣಮೂರ್ತಿ :— ಮಾನ್ಯ ಸಚಿವರು ಚಿಕ್ಕಬೂಸಪ್ಪನ ಪ್ರಕರಣದಲ್ಲಿ ಪರಿಹಾರ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಬಸವೇಗೌಡನ ಬಗ್ಗೆ ಅಕ್ಸಿಡೆಂಟ್ ಎಂದು ಹೇಳಿಬಿಟ್ಟಿದ್ದಾರೆ. ಅದು ಅಕ್ಸಿಡೆಂಟಿನಿಂದಾದ್ದಲ್ಲ, ಬೆಳಿಗ್ಗೆ ಆ ರೈತ ಉಚ್ಚುಮೆ ಮಾಡಲು ಹೋದ ಸಂದರ್ಭದಲ್ಲಿ ಆಕಸ್ಮಿಕ ಆಗಿರುವುದು. ಆದ್ದರಿಂದ ಈ ಎರಡು ವ್ಯಕ್ತಿಗಳಿಗೂ ಸರ್ಕಾರದ ಮಾನದಂಡದ ಪ್ರಕಾರ ಪರಿಹಾರವನ್ನು ತುರ್ತಾಗಿ ಕೊಡಿಸಿಕೊಡಬೇಕೆಂದು ಮತ್ತೊಮ್ಮೆ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ :— ಅಧ್ಯಕ್ಷರೇ, ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಬಸವೇಗೌಡನ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ; ಇನ್ನೊಂದು ಗಂಟೆಯಲ್ಲೇ ಮಾನ್ಯ ಸದಸ್ಯರಿಗೆ ಸಂಪೂರ್ಣ ಮಾಹಿತಿ ತರಿಸಿಕೊಡುತ್ತೇನೆ.

ಶ್ರೀ ಯು.ಬಿ. ಬಣಕಾರ್ :— ಅಧ್ಯಕ್ಷರೇ, ಇದೇ ರೀತಿ ಪ್ರಶ್ನೆಗೆ ಲಿಖಿತ ಮೂಲಕ ಉತ್ತರ ನನಗೆ ಬಂದಿದೆ. ಈಗಿನ ಹಾವೇರಿ, ಗದಗ್, ಧಾರವಾಡ ಜಿಲ್ಲೆಯಲ್ಲಿ ಇಂತಹವು 19 ಪ್ರಕರಣಗಳು ಬಾಕಿ ಇವೆ. ಅಘಾತಕ್ಕೊಳಗಾದ ಆ ಕುಟುಂಬಗಳಿಗೆ ಆದಷ್ಟು ಬೇಗ ಪರಿಹಾರ ಕೊಡಬೇಕು ಆದರೆ ಒಂದು ಎರಡು ವರ್ಷಗಳೂ ಅನಿವಶ್ಯಕ ವಿಳಂಬವಾಗುತ್ತಿದೆ. ಅದನ್ನು ತಪ್ಪಿಸುವ ಸಲುವಾಗಿ ತಾವೊಂದು ಕಾಲಮಿತಿ ಕಾರ್ಯಕ್ರಮ ಹಾಕಿಕೊಳ್ಳಿ. ವಾರಸುದಾರರು ಅರ್ಜಿ ತಂದುಕೊಟ್ಟ ಒಂದು ತಿಂಗಳೊಳಗೆ ಎಸ್.ಇ ಅವರಿಂದ ಪರಿಹಾರ ಕೊಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಕೊರ್ತಿ-ಕೊಲ್ಹಾರ ಸೇತುವೆ ಕಾಮಗಾರಿಗಳು.

367(2238) ಶ್ರೀ ಕಾರ್‌ಜೋಳ್ ಗೋವಿಂದ ಮಕಟಪ್ಪ (ಮುಧೋಳ) :— ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊರ್ತಿ-ಕೊಲ್ಹಾರ ಸೇತುವೆಯ ನಿರ್ಮಾಣ ಕಾರ್ಯದ ಬಗ್ಗೆ ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಿ ಆ ಭಾಗದ ಜನರು ಮುಷ್ಕರ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಸರ್ಕಾರ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಲು ಇರುವ ತೊಂದರೆ ಏನು?

ಇ) ಇದರ ನಿರ್ಮಾಣಕ್ಕೆ ಬೇಕಾಗುವ ಅಂದಾಜು ಮೊತ್ತ ಎಷ್ಟು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :—

ಅ) ಹೌದು

ಆ) ಕೊರ್ತಿ-ಕೋಲ್ಹಾರ ಹತ್ತಿರ ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪರ್ಯಾಯ ವಾಹನ ಪಥಗಳ (ಅಲೈನ್‌ಮೆಂಟ್) ಸರ್ವೇ ಕೆಲಸ ಪೂರ್ಣಗೊಂಡಿದೆ.

ಇ) ಇವುಗಳ ಪೈಕಿ ಹುಬ್ಬಳ್ಳಿ-ಸೋಲಾಪುರ ರಾಜ್ಯ ಹೆದ್ದಾರಿಯಲ್ಲಿ ಈಗಿರುವ ಹಾಸ್ ವೇ ಸ್ಥಳದಲ್ಲಿ ಹೈ ಲೆವೆಲ್ ಸೇತುವೆ ನಿರ್ಮಾಣ ಮಾಡುವುದು ಹಾಗೂ ಟಕ್ಕಳಗಿ ಗ್ರಾಮದ ಹತ್ತಿರ ಈಗಿರುವ ಹಾಸ್‌ವೇಗೆ 2 ಕಿಲೋಮೀಟರ್ ಕೆಳಭಾಗದಲ್ಲಿ ಸೇತುವೆ ನಿರ್ಮಾಣದ ಪ್ರಸ್ತಾವನೆಗಳ ಕುರಿತು ಪರಿಶೀಲಿಸಲಾಗುತ್ತಿದ್ದು, ಈ ಪ್ರಸ್ತಾವನೆಗಳ ತಾಂತ್ರಿಕ ಅವಶಕ್ಯತೆ ಹಾಗೂ ಇತರೆ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ತಜ್ಞರ ಅಭಿಪ್ರಾಯ ಪಡೆದು ಇದರಲ್ಲಿ ಅನುಕೂಲಕರವಾದ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ) ರೂ. 48.00 ಕೋಟಿಗಳು.

ಶ್ರೀ ಗೋವಿಂದ ಮಕಟಪ್ಪ ಕಾರ್ಜೋಳ :— ಅಧ್ಯಕ್ಷರೇ, ಉತ್ತರದಲ್ಲಿ ಕೊಟ್ಟಿರುವ ಹಾಗೆ ಈ ಬಗ್ಗೆ ತಜ್ಞರ ಸಲಹೆ ಪಡೆಯಲು ಎಷ್ಟು ಸಮಯ ಬೇಕಾಗಬಹುದು? ಎರಡನೆಯದು, ಆಲಮಟ್ಟಿ ಆಣೆಕಟ್ಟೆಯಲ್ಲಿ ನೀರನ್ನು ಯಾವಾಗ ನಿಲ್ಲಿಸುತ್ತೀರಿ? ನೀರು ನಿಲ್ಲಿಸಿದ ಮೇಲೆ ಸೇತುವೆ ಕೆಲಸ ಮಾಡಲು ಸಾಧ್ಯವೋ ಹೇಗೆ? ಆಲಮಟ್ಟಿಯ ಹಿನ್ನೀರಿನಲ್ಲಿ ಸೇತುವೆ ಇರುವ ಸ್ಥಳ ಮುಳುಗಡೆ ಆಗುವುದರಿಂದ ಏನು ಮಾಡುತ್ತೀರಿ? ಆಲಮಟ್ಟಿ ಯೋಜನೆ ಮುಗಿಯುವ ವೇಳೆಗಾದರೂ ಈ ಕೆಲಸ ಮುಗಿಯುವ ಸಾಧ್ಯತೆ ಇದೆಯೇ? ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರ ಹೇಳಬೇಕು. ಇದರ ಜೊತೆಗೆ ಮುಳುಗಡೆಯಾದ

10.50 ಎ.ಎಂ.

ನಂತರ ತಾವು ಯಾವ ರೀತಿ ಕೆಲಸ ಪ್ರಾರಂಭಮಾಡುತ್ತೀರಿ? ಆಣೆಕಟ್ಟಿನಲ್ಲಿ ನೀರು ನಿಲ್ಲಿಸುವುದನ್ನು ನಿಲ್ಲಿಸುತ್ತೀರೋ ಅಥವಾ ಮತ್ತೆ ಏನಾದರೂ ವ್ಯವಸ್ಥೆ ಮಾಡುತ್ತೀರೋ ಎನ್ನುವುದನ್ನು ಹೇಳಬೇಕು. ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಇನ್ನು ಎಷ್ಟು ಕಾಲ ಬೇಕಾಗಬಹುದು?

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಈ ಸೇತುವೆ 508 ಮೀಟರ್ ನಮ್ಮ ರೋಡ್ ಲೆವೆಲ್‌ಗೆ ಇರುವುದು. 524 ಮೀಟರ್ ನಮ್ಮ ಆಲಮಟ್ಟಿ ಡ್ಯಾಂ ಲೆವೆಲ್. ಅದಕ್ಕೆ ಸುಮಾರು 48 ಕೋಟಿ ರೂಪಾಯಿಗಳ ಎಸ್ಟಿಮೇಟ್ ಆಗಿದೆ. ಸ್ವಲ್ಪ ಟೆಕ್ನಿಕಲ್ ಫೀಸಿಬಿಲಿಟಿ ಬಗ್ಗೆ ಅಲ್ಲಿ ಜನರು ಒಂದು ಭಾಗದ ರೈತರೆಲ್ಲಾ ಬೇರೆ ಕಡೆ ಪ್ರಾರಂಭ ಮಾಡಿ ಎಂದರೆ, ಮತ್ತೊಂದು ಭಾಗದ ರೈತರು ಮತ್ತೊಂದು ಕಡೆ ಮಾಡಿ ಎನ್ನುತ್ತಿದ್ದಾರೆ.

ಈ ರೀತಿ ಒಂದು ಸಂಶಯ ಇತ್ತು. ಈಗ ಟೆಕ್ನಿಕಲಿ ಎಲ್ಲಾ ಕ್ಲಿಯರ್ ಮಾಡಿದ್ದೇವೆ. ಕೃಷ್ಣಾಭಾಗ್ಯ ಜಲ ನಿಗಮದಲ್ಲಿ ಇದನ್ನು ಇಟ್ಟುಕೊಂಡು ಇನ್ನೊಂದು ಲಾಸ್ಟ್ ಮೀಟಿಂಗ್ ಆಗಬೇಕಾಗಿತ್ತು. ನಾವು ಮುಂದಿನ ಮೀಟಿಂಗ್‌ನಲ್ಲಿ ಟೆಂಡರ್ ಕರೆಯುವುದಕ್ಕೆ ಯಾವುದು ಮೋರ್ ಅಡ್ವಾನ್ಟೇಜಸ್ ಇದೆ, ಮೋರ್ ಅಡ್ವಾನ್ಟೇಜಸ್ ಎಂದರೆ ಕಡಿಮೆ ದುಡ್ಡಿನಲ್ಲಿ ಹೆಚ್ಚು ಜನರಿಗೆ ಸಹಾಯವಾಗುವ ಅಡ್ವಾನ್ಟೇಜಸ್ ಪ್ರಪೋಸಲ್ ತೆಗೆದುಕೊಂಡು ಈ ಪ್ರಾಜೆಕ್ಟ್‌ನ್ನು ಶುರುಮಾಡುತ್ತೇವೆ. ಆಲಮಟ್ಟಿ ವಿಚಾರವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಕುರ್‌ಜೋಳ ಅವರಿಗೆ ಎಲ್ಲಾ ಚೆನ್ನಾಗಿ ಗೊತ್ತಿದೆ. ಆದಷ್ಟು ಬೇಗ ಈ ತಿಂಗಳ ಕೊನೆಯ ವೇಳೆಗೆ ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಸೋಮವಾರ ಪೇಟೆ ತಾಲ್ಲೂಕಿನ ವಿದ್ಯುತ್ ಉತ್ಪಾದನಾ ಕೇಂದ್ರ.

368 (2361) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಇಂಧನ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ಜಲಾಶಯದಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನಿರ್ಮಿಸಲಾಗುವುದೇ ಹಾಗಿದ್ದಲ್ಲಿ ಆ ಬಗ್ಗೆ ಯಾವ ಕಂಪನಿಗೆ ಪರವಾನಿಗೆ ಕೊಡಲಾಗಿದೆ.

ಆ) ಅದರಿಂದ ಎಷ್ಟು ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ನಿರೀಕ್ಷೆ ಇದೆ.

ಇ) ಸೋಮವಾರಪೇಟೆಯ ತಾಲ್ಲೂಕು ಶನಿವಾರ ಸಂತೆ ಮತ್ತು ಆಲೂರು, ಸಿದ್ದಾಪುರಗಳಲ್ಲಿ ವಿದ್ಯುತ್ ಘಟಕ ಸ್ಥಾಪನೆ ಮಾಡುವ ಉದ್ದೇಶ ಇದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಹೌದು. ಮೆ: ಎನರ್ಜಿ ಡೆವಲಿಪ್‌ಮೆಂಟ್ ಕಂಪೆನಿ ಲಿಮಿಟೆಡ್.

ಆ) ಈ ಕಿರು ಜಲವಿದ್ಯುತ್ ಸ್ಥಾವರದ ಸಾಮರ್ಥ್ಯವು 9 ಮೆಗಾವಾಟ್ ಇದ್ದು ಸುಮಾರು 40 ಮಿಲಿಯನ್ ಯೂನಿಟ್‌ಗಳನ್ನು ಉತ್ಪಾದನೆ ಮಾಡುವ ನಿರೀಕ್ಷೆ ಇದೆ.

ಇ) ಇಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ :— ಮಾನ್ಯ ಅಧ್ಯಕ್ಷರೇ, ಇಲ್ಲಿ ನನ್ನ ಪ್ರಶ್ನೆಗೆ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಹಾರಂಗಿಯಲ್ಲಿ ಕಿರು ಜಲವಿದ್ಯುತ್ ಸ್ಥಾವರದಲ್ಲಿ ಸುಮಾರು 9 ಮೆಗಾವ್ಯಾಟನಷ್ಟು ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಈ 9 ಮೆಗಾವ್ಯಾಟ್ ವಿದ್ಯುತ್‌ನ್ನು ಕೊಡಗಿಗೆ ಕೊಡುತ್ತೀರಾ